ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1995-96ನೇ ಸಾಲಿನಲ್ಲಿ 2 ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ. ಸ್ಥಳಗಳನ್ನು ಇನ್ನು ನಿರ್ಧರಿಸಿಲ್ಲ.

ಆ) -ಇಲ್ಲ-

ಇ) ಇನ್ನೂ ಅಂತಿಮ ತೀರ್ಮಾನವಾಗಿಲ್ಲ.

ಈ) -ಇಲ್ಲ-

ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಕುರಿತು.

320 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಹಣಕಾಸು ವರ್ಷದಲ್ಲಿ ಜನವರಿ 31ರ ವೇಳೆಗೆ ರಾಜ್ಯದಲ್ಲಿ ಸಂಗ್ರಹಿಸಲಾದ ಅಬಕಾರಿ ತೆರಿಗೆ, ವಾಣಿಜ್ಯ ತೆರಿಗೆ ಎಷ್ಟು?

ಆ) ಕಳೆದ 3 ವರ್ಷಗಳ ಇದೇ ಅವಧಿಗೆ ಹೋಲಿಸಿದರೆ ಆಗುವ ಹೆಚ್ಚಳ ಎಷ್ಟು,

ಇ) ರೆಗ್ಯುಲೇಟೆಡ್ ಮಾರುಕಟ್ಟೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ತೆರಿಗೆ ಸೋರುವಿಕೆ ನಡೆದಿರುವುದು ಸರ್ಕಾರದ ಗಮನಕೆ ಬಂದಿದೆಯೇ,

ಈ) ಈ ಸೋರುವಿಕೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು,

ಉ) ಈ ಕ್ರಮಗಳಿಂದಾದ ಪರಿಣಾಮಗಳೇನು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಅಬಕಾರಿ ತೆರಿಗೆ - ರೂ. 0180.40 ಕೋಟಿಗಳು

ವಾಣಿಜ್ಯ ತೆರಿಗೆ - ರೂ. 2724.96 ಕೋಟಿಗಳು

ಅ)	ವರ್ಷ (1ನೇ ಏಪ್ರಿಲ್ ನಿಂದ ಜನವರಿ ಅಂತ್ಯದವರೆಗೆ)	ವಾಣಿಜ್ಯ ತೆರಿಗೆ (ರೂ. ಕೋಟಿ ಗಳಲ್ಲಿ)	ವಾಣಿಜ್ಯ ತೆರಿಗೆ ಬೆಳವಣಿಗೆ ದರ	ಅಬಕಾರಿ ತೆರಿಗೆ (ರೂ. ಕೋಟಿ ಗಳಲ್ಲಿ)	ಅಬಕಾರಿ ತೆರಿಗೆ ಬೆಳವಣಿಗೆ ದರ
	1992-93	1597.26	15.43	085.19	12.81
	1993-94	1833.73	14.80	121.48	29.87
	1994-95	2103.90	14.73	135.48	10.33
	1995-96	2724.96	29.52	180.40	24.90

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಯೋಚಿಸಿದ ಹಣ.

322 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಹಣಕಾಸು ವರ್ಷದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸರ್ಕಾರ ವೆಚ್ಚ ಮಾಡಲು ಯೋಜಿಸಿದ ಹಣ ಎಷ್ಟು?

ಆ) ಇದರಲ್ಲಿ ಬಾಂಡುಗಳ ಮೂಲಕ ಎಷ್ಟು ಹಣ ಸಂಗ್ರಹವಾಗಿದೆ.?

ಇ) ಜನವರಿ 31ರ ವೇಳೆಗೆ ಎಷ್ಟು ಹಣ ಸಂಗ್ರಹವಾಗಿದೆ?

ಈ) ಪ್ರಸಕ್ತ ಹಣಕಾಸು ವ್ಷದಲ್ಲಿ ಎಷ್ಟು ಹಣ ನೀರಾವರಿ ಬಾಂಡುಗಳ ಮುಖಾಂತರ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸಂಗ್ರಹಿಸಲು ಸರ್ಕಾರ ಕಾರ್ಯಕ್ರಮ ರೂಪಿಸಿದೆ?

ಉ) ಜನವರಿ 31 ರವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮಾಡಲಾಗಿರುವ ಒಟ್ಟು ವೆಚ್ಚ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) 1995-96ನೇ ಹಣಕಾಸು ವರ್ಷದಲ್ಲಿ ರೂ. 677.00 ಕೋಟಿಗಳನ್ನು ಖರ್ಚು ಮಾಡಲು ಯೋಜಿಸಲಾಗಿದೆ. ಇದರಲ್ಲಿ ರೂ. 365.00 ಕೋಟಿಗಳನ್ನು ಸರ್ಕಾರದ ಮೂಲಕ ಮತ್ತು ಉಳಿದ ರೂ. 312.00 ಕೋಟಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಖರ್ಚು ಮಾಡಲು ಯೋಜಿಸಿದೆ.